/242556/2022

Biogas

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** : 2010-11 ರಿಂದ 2013-14 ಮತ್ತು 2017-18ನೇ ಸಾಲುಗಳಲ್ಲಿ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ (NNBOMP) ರಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ/ರಾಜ್ಯ ಸಹಾಯಧನವನ್ನು ನೀಡುವ ಕುರಿತು.

**ಓದಲಾಗಿದೆ** :

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿವಮೊಗ್ಗ ರವರ ಪತ್ರ ಸಂಖ್ಯೆ: ಜಿಪಂಶಿ/ಅಭಿ(7)/ವಿವ-22/2019-2020/2020-21 ದಿನಾಂಕ: 27.01.2021.
2. ದಿನಾಂಕ: 28.07.2020 ರ ಪರಿಶೀಲನಾ ವರದಿ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ರವರ ಪತ್ರ ಸಂಖ್ಯೆ: ಬೆಜಿಪಂ/NNBOMP ಅನುಷ್ಠಾನ/4/2020-21 ದಿನಾಂಕ: 17.12.2020.

**ಪ್ರಸ್ತಾವನೆ:**

ಮೇಲೆ ಓದಲಾದ - 1 ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರು 2010-11 ರಿಂದ 2013-14 ಮತ್ತು 2017-18ನೇ ಸಾಲಿನಲ್ಲಿ ನಿರ್ಮಿಸಲಾದ ಜೈವಾನಿಲ ಸಾವರಗಳಿಗೆ ಬಾಕಿ ಇರುವ ಕೇಂದ್ರ ಹಾಗೂ ರಾಜ್ಯ ಸಹಾಯಧನ ಪಾವತಿಸಲು ರೂ.72.90 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಪರಿಶೀಲಿಸಲಾಗಿ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ (NNBOMP) ರಡಿ ಕೇಂದ್ರ ಹಾಗೂ ರಾಜ್ಯ ಸಹಾಯಧನದ ಲಭ್ಯತೆ ಇಲ್ಲದೇ ಇರುವುದರಿಂದ ಕಾರ್ಯಕ್ರಮದಡಿ ಲಭ್ಯವಿರುವ ರೂ.7.52 ಲಕ್ಷ ಕೇಂದ್ರ ಸಹಾಯಧನ ಬಿಡುಗಡೆ ಮಾಡಲು, ಮೇಲೆ 3 ರಲ್ಲಿ ಓದಲಾದಂತೆ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನಲ್ಲಿ ಉದ್ದೇಶಿತ ಯೋಜನೆಗೆ ವಿನಿಯೋಗಿಸದೇ ಬಾಕಿ ಇರಿಸಿಕೊಂಡಿರುವ ಕೇಂದ್ರ ಹಾಗೂ ರಾಜ್ಯ ಸಹಾಯಧನ ರೂ.25.71 ಲಕ್ಷಗಳನ್ನು ಹಿಂಪಡೆದು ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಲು, ಶಿವಮೊಗ್ಗ ಜಿಲ್ಲಾ ಪಂಚಾಯತ್ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ರೂ.16.56 ಲಕ್ಷಗಳನ್ನು ವಿನಿಯೋಗಿಸಿಕೊಳ್ಳಲು ಅನುದಾನದ ಮಿತಿಗೊಳಪಟ್ಟು ಅಂದರೆ ಒಟ್ಟಾರೆ ರೂ.49.78 ಲಕ್ಷಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರಿಗೆ ಬಿಡುಗಡೆ ಮಾಡಲು ಸರ್ಕಾರ ಉದ್ದೇಶಿಸಿದೆ. ಪ್ರಯುಕ್ತ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 16 ಜೈಅಯೋ 2021, ಬೆಂಗಳೂರು ದಿನಾಂಕ: 04.04.2022**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2010-11 ರಿಂದ 2013-14 ಮತ್ತು 2017-18ನೇ ಸಾಲಿನಲ್ಲಿ ನವ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ/ರಾಜ್ಯ ಸಹಾಯಧನವನ್ನು ರೂ.**49.78 ಲಕ್ಷ (ನಲವತ್ತೊಂಭತ್ತು ಲಕ್ಷದ ಎಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ)** ಗಳ ಮಿತಿಗೊಳಪಟ್ಟು ಈ ಕೆಳಕಂಡಂತೆ ಬಿಡುಗಡೆ ಮಾಡಿ ಆದೇಶಿಸಿದೆ.

(ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲಾ ಪಂಚಾಯತ್ | ಕಾರ್ಯಕ್ರಮದಡಿ ಲಭ್ಯವಿರುವ ಅನುದಾನ | ಹಿಂಪಡೆದ ಅನುದಾನ | ಹಿಂಪಡೆದ ಅನುದಾನವನ್ನು ವರ್ಗಾಯಿಸಿದ ಜಿಲ್ಲೆ | ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಿದ /ಅನುಮತಿಸಲಾದ ಅನುದಾನ |
|---|---|---|---|---|---|
| 1. | ಬೆಂಗಳೂರು ನಗರ | 25.77 | 25.71 | ಶಿವಮೊಗ್ಗ | 25.71 |
| 2. | ಶಿವಮೊಗ್ಗ | | | | 7.52 |
| 3. | ಶಿವಮೊಗ್ಗ | 16.57 | | | 16.57 |
| ಒಟ್ಟು | | | | | **49.78** |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರು ಹಿಂಪಡೆದು ಶಿವಮೊಗ್ಗ ಜಿಲ್ಲಾ ಪಂಚಾಯತ್ ಗೆ ವರ್ಗಾಯಿಸಿದ ಅನುದಾನವನ್ನು PFMS ಮೂಲಕ ಕೆಳಕಂಡ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು.

| District | Name of the A/c Holder | Name of the Bank | IFSC Code | Account No. |
|---|---|---|---|---|
| Shimoga | Chief Executive Officer & Chief Account Officer | Canara Bank | CNRB0000521 | 0521101049126 |

**ಷರತ್ತು ಮತ್ತು ನಿಬಂಧನೆಗಳು**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿವಮೊಗ್ಗ ರವರ ದಿನಾಂಕ: 27.01.2021ರ ಉಲ್ಲೇಖಿತ – 2ರ ಅಭಿಪ್ರಾಯದನ್ವಯ ಪರಿಶೀಲಿಸಿ ಆಯಾ ಸಾಲಿನ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪರಿಶೀಲಿಸಿ ಹಿಂದಿನ ಸಾಲುಗಳಲ್ಲಿ ನಿರ್ಮಿಸಲಾದ ಸ್ಥಾವರಗಳ ಜೇಷ್ಠತೆಯನುಸಾರ ಕೇಂದ್ರ/ರಾಜ್ಯ ಸಹಾಯಧನ ಪಾವತಿಸಲು ಕ್ರಮವಹಿಸುವುದು.
2. ಪಾವತಿಸಲಾದ ಸಹಾಯಧನಕ್ಕೆ ಅನುಗುಣವಾಗಿ ವೆಚ್ಚ ಭರಿಸಿ ವರ್ಷವಾರು ಫಲಾನುಭವಿಗಳ ವಿವರಗಳನ್ನು PDF ಮುಖೇನಾ ನಿಗಧಿತ ನಮೂನೆಯಲ್ಲಿ dd.b.rep.rdpr@gmail.com ಗೆ ಕಳುಹಿಸುವುದು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತ್ ರವರುಗಳು ಅನುದಾನವನ್ನು ವರ್ಗಾಯಿಸಲು ಹಾಗೂ ವರ್ಗಾಯಿಸಿದ ಅನುದಾನವನ್ನು ಪಡೆಯಲು ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**Signed by Shrinivas H Marangappanavar**
**Date: 04-04-2022 16:38:10**

4/4/22

**(ಶ್ರೀನಿವಾಸ ಹೆಚ್. ಮಾರಂಗಪ್ಪನವರ)**
ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಮತ್ತು ಬೆಂಗಳೂರು ನಗರ ಜಿಲ್ಲಾ

ಪಂಚಾಯತ್.

3. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ ಮತ್ತು ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
4. ವ್ಯವಸ್ಥಾಪಕರು, SBM, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಇಲಾಖಾ ಗಣಕಜಾಲ.
6. ರಕ್ಷಾ ಕಡತಕ್ಕೆ/ಹೆಚ್ಚುವರಿ

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ , ಬೆಂಗಳೂರು.
2. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.
3. ನಿರ್ದೇಶಕರು, (ಗ್ರಾಮೀಣಾಭಿವೃದ್ಧಿ), ರವರ ಆಪ್ತ ಸಹಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.